(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:172/2013-14 ದಿನಾಂಕ:19.07.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

* * * * *

**ವಾದಿಗಳು: ಶ್ರೀ/ ಶ್ರೀಮತಿ**

1] ಟಿ.ರಂಗಸ್ವಾಮಿ ತಂದೆ ಲೇಟ್ ಮಡ್ಡೇರ ದೊಡ್ಡ ಭರ್ಮಪ್ಪ
ವಾಸ: ಭುವನಹಳ್ಳಿ ಗ್ರಾಮ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಕೆ.ಸಿ.ಶರಣಪ್ಪ, ವಕೀಲರು, ಹೊಸಪೇಟೆ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ಟಿ.ಎಂ.ಹೊನ್ನೂರಪ್ಪ ತಂದೆ ಲೇಟ್ ಮಡ್ಡೇರ ಭರ್ಮಪ್ಪ
2] ಟಿ.ಎಂ.ಫಕ್ಕೀರಪ್ಪ ತಂದೆ ಲೇಟ್ ಮಡ್ಡೇರ ಭರ್ಮಪ್ಪ
ವಾಸ: ಭುವನಹಳ್ಳಿ ಗ್ರಾಮ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಕೆ.ಗುರುಪ್ರಸಾದ್ ರಾವ್, ವಕೀಲರು, ಹೊಸಪೇಟೆ]**

3] ತಹಶೀಲ್ದಾರರು, ಹೊಸಪೇಟೆ.

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಮಲಾಪುರ | 61 ಗೋನಾಳ್ | 95/ಎ | 03 ಎಕರೆ 20 ಸೆಂಟ್ಸ್ |
| | | | 90/ಸಿ | 01 ಎಕರೆ 01 ಸೆಂಟ್ಸ್ |
| | | | 96/ಬಿ | 02 ಎಕರೆ 82 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ 61 ಗೋನಾಳ್ ಗ್ರಾಮದ ಸ.ನಂ.95/ಎ ಪೈಕಿ ವಿಸ್ತೀರ್ಣ:03 ಎಕರೆ 20 ಸೆಂಟ್ಸ್; ಸ.ನಂ.90/ಸಿ ಪೈಕಿ ವಿಸ್ತೀರ್ಣ:01 ಎಕರೆ 01 ಸೆಂಟ್ಸ್; ಸ.ನಂ.96/ಬಿ ಪೈಕಿ ವಿಸ್ತೀರ್ಣ:02 ಎಕರೆ 82 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕಮಲಾಪುರ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:6/1991-92 ದಿನಾಂಕ:12.12.1991 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:17.12.2013 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:11.02.2014 ಕ್ಕೆ ನಿಗಧಿಪಡಿಸಿ ಉಭಯ ಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳ ಪ್ರಕಾರ ಸದರಿ ವ್ಯಾಜ್ಯದ ಜಮೀನುಗಳಲ್ಲಾದ ತಪ್ಪನ್ನು ಸರಿಪಡಿಸುವಂತೆ ಕೋರಿ ಸದರಿ ಅಪೀಲನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ವ್ಯಾಜ್ಯದ ಜಮೀನುಗಳು ಮೂಲತ: ಮಡ್ಡೇರ ಸಣ್ಣ ಹನುಮಂತಪ್ಪ ಇವರಿಗೆ ಸೇರಿದ್ದು, ಇವರು ವಾದಿಯ ತಾತನಾಗಿರುವುದಾಗಿ, ಇವರಿಗೆ ಸಣ್ಣ ಹನುಮವ್ವ ಎಂಬ ಹೆಂಡತಿಯಿದ್ದು, ಮತ್ತು ಮಡ್ಡೇರ ದ್ಯಾಮವ್ವ ಎಂಬ ಮಗಳು ಹಾಗೂ ಮಡ್ಡೇರ ದೊಡ್ಡ ಭರ್ಮಪ್ಪ ಎಂಬ ಮಗನಿರುವುದಾಗಿ ತಿಳಿಸಿರುತ್ತಾರೆ. ಸದರಿ ಮಡ್ಡೇರ ಭರ್ಮಪ್ಪ ಇವರ ಮರಣಾನಂತರ ವಾದಿಯೇ ಸದರಿ ಜಮೀನಿನ ಹಕ್ಕನ್ನು ಹೊಂದಿರುವುದಾಗಿ, ಇವರ ಮರಣದ ಲಾಭ ಪಡೆದ ಪ್ರತಿವಾದಿಗಳು ಸುಳ್ಳು ವಂಶವೃಕ್ಷ ಸೃಷ್ಟಿಸಿ ತಮ್ಮ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿಕೊಂಡಿರುವುದಾಗಿ ವಾದಿಪರ ವಕೀಲರು ತಿಳಿಸಿರುತ್ತಾರೆ.

ಸದರಿ ಹಕ್ಕು ಬದಲಾವಣೆಯ ಬಗ್ಗೆ ತಿಳಿದ ವಾದಿಯು ಸದರಿ ಹಕ್ಕು ಬದಲಾವಣೆಗೆ ಆಕ್ಷೇಪಣೆ ಮಾಡಿದ್ದು, ವಾದಿಯು ಮಡ್ಡೇರ ಭರ್ಮಪ್ಪ ತಂದೆ ಮಡ್ಡೇರ ಭೀಮಪ್ಪ ಇವರ ಮಗನಾಗಿರುವುದಾಗಿ ಆದರೆ ಮಡ್ಡೇರ ದೊಡ್ಡ ಭರಮಪ್ಪ ಇವರು ಪ್ರತಿವಾದಿ-1 ಮತ್ತು 2 ರವರಿಗೆ ಯಾವುದೇ ಸಂಬಂಧವಿರುವುದಿಲ್ಲವೆಂದು, ಇವರುಗಳಿಗೆ ಸದರಿ ವ್ಯಾಜ್ಯದ ಜಮೀನುಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲವೆಂದು, ಹಾಗೂ ವಾದಿಯಾದ ರಂಗಸ್ವಾಮಿ ಇವರೇ ಸದರಿ ವ್ಯಾಜ್ಯದ ಜಮೀನುಗಳ ಹಕ್ಕನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಮಡ್ಡೇರ ಭೀಮಪ್ಪ ಇವರಿಗೆ ಸಂಬಂಧಿಸಿದ ಆಸ್ತಿಯಾದ 61 ಗೋನಾಳ್ ಗ್ರಾಮಕ್ಕೆ ಸಂಬಂಧಿಸಿದ ಸ.ನಂ.145/1 ವಿಸ್ತೀರ್ಣ:05 ಎಕರೆ 76 ಸೆಂಟ್ಸ್ ಜಮೀನು ಈಗಾಗಲೇ ಪ್ರತಿವಾದಿ-1 ಮತ್ತು 2 ರವರ ಹೆಸರಿನಲ್ಲಿ ಹಕ್ಕು ಬದಲಾವಣೆ ಆಗಿರುವುದಾಗಿ, ಆದರೆ ಸದರಿ ವ್ಯಾಜ್ಯದ ಜಮೀನುಗಳ ಮೇಲೆ ಇವರಿಗೆ ಯಾವುದೇ ಹಕ್ಕು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರತಿವಾದಿ-1 ಮತ್ತು 2 ರವರು ಸತ್ಯಾಂಶಗಳನ್ನು ಮುಚ್ಚಿಟ್ಟು ಸುಳ್ಳು ದಾಖಲೆಗಳನ್ನು, ತಪ್ಪು ಹೇಳಿಕೆಗಳನ್ನು ನೀಡಿ ತಮ್ಮ ಹೆಸರನ್ನು ಸದರಿ ವ್ಯಾಜ್ಯದ ಜಮೀನುಗಳ ಪಹಣಿ ಪತ್ರಿಕೆಯಲ್ಲಿ ನಮೂದಿಸಿಕೊಂಡಿರುವುದಾಗಿ, ಸದರಿ ನಮೂದನ್ನು ಮಾಡುವಾದ ಪ್ರತಿವಾದಿ-3 ರವರು ಯಾವುದೇ ರೀತಿಯ ವಿಚಾರಣೆ ನಡೆಸದೇ ಪ್ರತಿವಾದಿ-1 ಮತ್ತು 2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಿದ್ದು ಸದರಿ ಆದೇಶವು ಕಾನೂನು ಬಾಹಿರವಾಗಿರುವುದಾಗಿ, ಸದರಿ ಹಕ್ಕು ಬದಲಾವಣೆಯಲ್ಲಾದ ತಪ್ಪನ್ನು ಸರಿಪಡಿಸುವಂತೆ ಪ್ರತಿವಾದಿ-3 ರವರಿಗೆ ನಿರ್ದೇಶನ ನೀಡಲು ಮನವಿ ಮಾಡಿಕೊಂಡಿರುತ್ತಾರೆ. ಸದರಿ ಪಹಣಿಯಲ್ಲಾದ ತಪ್ಪನ್ನು ಸರಿಪಡಿಸಲು ಪ್ರತಿವಾದಿ-1 ಮತ್ತು 3 ರವರಿಗೆ ಲೀಗಲ್ ನೋಟೀಸನ್ನು ಕಳುಹಿಸಲಾಗಿ ಪ್ರತಿವಾದಿಗಳು ಯಾವುದೇ ರೀತಿ ಪ್ರತಿಕ್ರಿಯಿಸಿರುವುದಿಲ್ಲವೆಂದು, ಆದಾಗ್ಯೂ, ಸದರಿ ವ್ಯಾಜ್ಯದ ಜಮೀನುಗಳು ವಾದಿಯ ಸ್ವಾಧೀನಾನುಭವದಲ್ಲಿರುವುದಾಗಿ, ಸದರಿ ಪ್ರಶ್ನಿತ ಆದೇಶದಿಂದ ಬಾದಿತಗೊಂಡ ವಾದಿಯು ಸದರಿ ಅಪೀಲನ್ನು ಸಲ್ಲಿಸಿರುವುದಾಗಿ, ಸದರಿ ಪ್ರಶ್ನಿತ ಆದೇಶವನ್ನು ತಳ್ಳಿಹಾಕುವಂತೆ ಹಾಗೂ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿ ಸದರಿ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದಗಳನ್ನು ಆಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.**

1. ಸದರಿ ಪ್ರಶ್ನಿತ ಹಕ್ಕು ಬದಲಾವಣೆ ಆದೇಶ ಸಂಖ್ಯೆ:6/1991-92 ದಿನಾಂಕ:12.12.1991 ವನ್ನು ಪರಿಶೀಲಿಸಲಾಗಿ ಪೋತಿ ವಾರಸ ಪ್ರಕಾರ ಸದರಿ ವ್ಯಾಜ್ಯದ ಜಮೀನುಗಳು ಪ್ರತಿವಾದಿಗಳ ಹೆಸರಿನಲ್ಲಿ ಹಕ್ಕು ಬದಲಾವಣೆ ಆಗಿರುವುದು ಕಂಡುಬಂದಿರುತ್ತದೆ.
2. ವಂಶವೃಕ್ಷವನ್ನು ಪರಿಶೀಲಿಸಲಾಗಿ ವಾದಿಗಳಾದ ಟಿ.ರಂಗಸ್ವಾಮಿ ಇವರು ಮಡ್ಡೇರ ದೊಡ್ಡ ಭರ್ಮಪ್ಪ ಇವರ ವಾರಸುದಾರರಾಗಿರುವುದು ಕಂಡುಬಂದಿರುತ್ತದೆ.
3. ವಾದಿಗಳು ಇವರ ಪೂರ್ವಜರ ಮರಣ ಪ್ರಮಾಣ ಪತ್ರಗಳನ್ನು ಲಗತ್ತಿಸಿದ್ದು, ದೊಡ್ಡ ಭರ್ಮಪ್ಪ ಇವರು ದಿನಾಂಕ:21.12.1979 ರಂದು ಮತ್ತು ದುರುಗಮ್ಮ ಇವರು ದಿನಾಂಕ:07.11.2005 ರಂದು, ದ್ಯಾಮವ್ವ ಇವರು ದಿನಾಂಕ:12.10.2005 ರಂದು, ಮಡ್ಡೇರು ಸಣ್ಣ ಹನುಮಂತಪ್ಪ ಉರ್ಫ್ ಸಣ್ಣ ಹನುಮಂತಪ್ಪ ಇವರು ದಿನಾಂಕ:10.05.1974 ರಂದು, ಹಾಗೂ ಸಣ್ಣ ಹನುಮವ್ವ ಇವರು ದಿನಾಂಕ:15.07.1986 ರಂದು ಮರಣ ಹೊಂದಿರುವುದು ಮರಣ ಪ್ರಮಾಣ ಪತ್ರಗಳಿಂದ ಕಂಡು ಬಂದಿರುತ್ತದೆ.
4. ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ 61 ಗೋನಾಳ್ ಗ್ರಾಮದ ಸ.ನಂ.95/ಎ ಪೈಕಿ ವಿಸ್ತೀರ್ಣ:03 ಎಕರೆ 20 ಸೆಂಟ್ಸ್; ಜಮೀನಿನ 1968-69 ರಿಂದ 1991-92 ರವರೆಗಿನ ಪಹಣಿ ಪತ್ರಿಕೆಯ ಕಾಲಂ 9 ರಲ್ಲಿ ಮಡ್ಡೇರು ಸಣ್ಣ ಹನುಮಂತಪ್ಪ, ಗಾದಿಗನೂರು ಎಂದು ನಮೂದು ಇದ್ದು, 1992-93 ರಿಂದ ಈವರೆಗಿನ ಪಹಣಿ ಪತ್ರಿಕೆಯ ಕಾಲಂ 9 ರಲ್ಲಿ **ಟಿ.ಎಂ.ಹೊನ್ನೂರಪ್ಪ ತಂದೆ ದಿ॥ ಭರ್ಮಪ್ಪ** ಇವರ ಹೆಸರು ಹಕ್ಕು ಬದಲಾವಣೆ ಆದೇಶ ಸಂಖ್ಯೆ:6/1991-92 ದಿನಾಂಕ:12.12.1991 ರ ಪ್ರಕಾರ ನಮೂದು ಇರುವುದು ಕಂಡುಬಂದಿರುತ್ತದೆ. ಹಾಗೂ ಸ.ನಂ.90/ಸಿ ಪೈಕಿ ವಿಸ್ತೀರ್ಣ:01 ಎಕರೆ 01 ಸೆಂಟ್ಸ್; ಸ.ನಂ.96/ಬಿ ಪೈಕಿ ವಿಸ್ತೀರ್ಣ:02 ಎಕರೆ 82 ಸೆಂಟ್ಸ್; ಜಮೀನುಗಳ ಕೈ ಬರಹ ಪಹಣಿಗಳನ್ನು ಸಲ್ಲಿಸಿದ್ದು, 1968-69 ರಿಂದ 1991-92 ರವರೆಗಿನ ಪಹಣಿ ಪತ್ರಿಕೆಯ ಕಾಲಂ 9 ರಲ್ಲಿ ಮಡ್ಡೇರು ಸಣ್ಣ ಹನುಮಂತಪ್ಪ, ಗಾದಿಗನೂರು ಎಂದು ನಮೂದು ಇದ್ದು, 1992-93 ರಿಂದ ಈವರೆಗಿನ ಪಹಣಿ ಪತ್ರಿಕೆಯ ಕಾಲಂ 9 ರಲ್ಲಿ **ಟಿ.ಎಂ.ಪಕ್ಕೀರಪ್ಪ ತಂದೆ ದಿ॥ ಭರ್ಮಪ್ಪ** ಇವರ ಹೆಸರು ಹಕ್ಕು ಬದಲಾವಣೆ ಆದೇಶ ಸಂಖ್ಯೆ:6/1991-92 ದಿನಾಂಕ:12.12.1991 ರ ಪ್ರಕಾರ ನಮೂದು ಇರುವುದು ಕಂಡುಬಂದಿರುತ್ತದೆ.

5. ಹಕ್ಕು ಬದಲಾವಣೆ ಆದೇಶ ಸಂಖ್ಯೆ:03/1992–93 ದಿನಾಂಕ:24.07.1993 ವನ್ನು ಸಲ್ಲಿಸಿದ್ದು, ಇದರಲ್ಲಿ ಸ.ನಂ.145 ಪೈಕಿ ವಿಸ್ತೀರ್ಣ:05 ಎಕರೆ 76 ಸೆಂಟ್ಸ್ ಜಮೀನು ಟಿ.ಭರ್ಮಪ್ಪ ಇವರು ಮರಣ ಹೊಂದಿರುವುದರಿಂದ ಇವರ ಮಕ್ಕಳಾದ **ಟಿ.ಎಂ.ಹೊನ್ನೂರಪ್ಪ, ಟಿ.ಎಂ.ಪಕ್ಕೀರಪ್ಪ ತಂದೆ ದಿ॥ ತಾಳೂರು ಭರ್ಮಪ್ಪ** ಇವರ ಹೆಸರಿಗೆ ಹಕ್ಕು ಬದಲಾವಣೆಯಾಗಿರುವುದು ಕಂಡುಬಂದಿರುತ್ತದೆ.
6. ಸದರಿ ಪ್ರಕರಣಕ್ಕೆ ಪ್ರತಿವಾದಿಗಳು ವಿಚಾರಣೆಗೆ ಸತತವಾಗಿ ಗೈರಾಗಿರುತ್ತಾರೆ. ಹಾಗೂ ಪ್ರತಿವಾದಿ–1 ಮತ್ತು 2 ರವರುಗಳು ತಾವೇ ಸದರಿ ಜಮೀನುಗಳ ಹಕ್ಕುದಾರರೆಂಬುದಕ್ಕೆ ಅಥವಾ ವಾರಸುದಾರರೆಂಬುದಕ್ಕೆ ರುಜುವಾತು ಪಡಿಸುವಂತಹ ಯಾವುದೇ ದಾಖಲೆಗಳನ್ನಾಗಲೀ ಅಥವಾ ಲಿಖಿತ ವಾದವನ್ನಾಗಲೀ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ 61 ಗೋನಾಳ್ ಗ್ರಾಮದ ಸ.ನಂ.95/ಎ ಪೈಕಿ ವಿಸ್ತೀರ್ಣ:03 ಎಕರೆ 20 ಸೆಂಟ್ಸ್; ಸ.ನಂ.90/ಸಿ ಪೈಕಿ ವಿಸ್ತೀರ್ಣ:01 ಎಕರೆ 01 ಸೆಂಟ್ಸ್; ಸ.ನಂ.96/ಬಿ ಪೈಕಿ ವಿಸ್ತೀರ್ಣ:02 ಎಕರೆ 82 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕಮಲಾಪುರ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:6/1991–92 ದಿನಾಂಕ:12.12.1991 ವನ್ನು ರದ್ದುಪಡಿಸುತ್ತಾ, ಪ್ರತಿವಾದಿ–1 ಮತ್ತು 2 ರವರ ಹೆಸರನ್ನು ಕಡಿಮೆ ಮಾಡಿ ಸದರಿ ವ್ಯಾಜ್ಯದ ಜಮೀನನ್ನು ವಾರಸ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

## –: ಆದೇಶ :–

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ 61 ಗೋನಾಳ್ ಗ್ರಾಮದ ಸ.ನಂ.95/ಎ ಪೈಕಿ ವಿಸ್ತೀರ್ಣ:03 ಎಕರೆ 20 ಸೆಂಟ್ಸ್; ಸ.ನಂ.90/ಸಿ ಪೈಕಿ ವಿಸ್ತೀರ್ಣ:01 ಎಕರೆ 01 ಸೆಂಟ್ಸ್; ಸ.ನಂ.96/ಬಿ ಪೈಕಿ ವಿಸ್ತೀರ್ಣ:02 ಎಕರೆ 82 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕಮಲಾಪುರ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:6/1991–92 ದಿನಾಂಕ:12.12.1991 ವನ್ನು ರದ್ದುಪಡಿಸುತ್ತಾ, ಪ್ರತಿವಾದಿ–1 ಮತ್ತು 2 ರವರ ಹೆಸರನ್ನು ಕಡಿಮೆ ಮಾಡಿ ಸದರಿ ವ್ಯಾಜ್ಯದ ಜಮೀನನ್ನು ವಾರಸ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:19.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ **ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ** ]
**ಸಹಾಯಕ ಆಯುಕ್ತರು,**
**ಹೊಸಪೇಟೆ.**

ಸಹಾಯಕ ಆಯುಕ್ತರು
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ
**ಪ್ರತಿಯನ್ನು:–** ತಹಶೀಲ್ದಾರರು, ಹೊಸಪೇಟೆ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.